ನಿಮ್ಮೊಡನೆ

# ಸೆಲ್ಫೀ: ಸಂಯಮ ಅಗತ್ಯ

ಯುವ ತಲೆಮಾರಿನ ಪ್ರದರ್ಶನಪ್ರಿಯತೆ ಹಾಗೂ ಜೀವನಪ್ರೀತಿಯ ಅಭಿವ್ಯಕ್ತಿಯಲ್ಲಿ 'ಸೆಲ್ಫೀ'ಗಳ ಪಾತ್ರ ಮುಖ್ಯವಾದುದು. ಜಾಗತೀಕರಣ, ಉದಾರೀಕರಣ, ಮಾಹಿತಿ ತಂತ್ರಜ್ಞಾನ – ಹೀಗೆ, ವಿವಿಧ ರೀತಿಗಳಲ್ಲಿ ಗುರ್ತಿಸಬಹುದಾದ ವರ್ತಮಾನದ ಕಾಲಘಟ್ಟವನ್ನು 'ಸೆಲ್ಫೀ ಯುಗ' ಎಂದೂ ಹೇಳಬಹುದು. ಈ ಸೆಲ್ಫೀ ಅಭಿವ್ಯಕ್ತಿ ಹೊಸ ತಲೆಮಾರಿನ ಬದುಕಿನ ಸ್ಥಿತ್ಯಂತರಗಳನ್ನೂ ಸೂಚಿಸುವಂತಿದೆ. ಹಾಗಾಗಿಯೇ 'ಸೆಲ್ಫೀ'ಗಳ ಬಗೆಗಿನ ಮಾತೆಂದರೆ ಅದು ತರುಣ ತರುಣಿಯರ ಕುರಿತ ಮಾತೂ ಹೌದು. ತನ್ನನ್ನು ತಾನು ಮೋಹಿಸಿಕೊಳ್ಳುವ ಮನುಷ್ಯನ ಗೀಳಿನ ರೂಪವಾಗಿ ಹುಟ್ಟಿಕೊಂಡಿರುವ 'ಸೆಲ್ಫೀ ವ್ಯಸನ' ಈಗ ಯುವಜನರ ಬದುಕಿನ ಭಾಗವಾಗಿ ಪರಿಣಮಿಸಿದೆ. ಸ್ಮಾರ್ಟ್ ಫೋನ್‌ಗಳು ಸುಲಭವಾಗಿ ಕೈಗೆಟಕುತ್ತಿರುವುದು ಕೂಡ 'ಸ್ವ ಭಾವಚಿತ್ರ'ದ ಜನಪ್ರಿಯತೆಗೆ ಕಾರಣಗಳಲ್ಲೊಂದಾಗಿದೆ. ಬೇಕಾಗಿಯೋ ಬೇಡವಾಗಿಯೋ ಫೋಟೊಗಳನ್ನು ತೆಗೆದುಕೊಳ್ಳುವುದು ಅನೇಕರ ಪಾಲಿಗೆ ಮೋಜಿನ ಸಂಗತಿ. ಕೆಲವರಿಗಂತೂ ಹೋದಲ್ಲೆಲ್ಲ ಆ ಪರಿಸರದೊಂದಿಗೆ ಸೆಲ್ಫೀಯ ಮೂಲಕ ತಮ್ಮನ್ನು ತಾವು ದಾಖಲಿಸಿಕೊಳ್ಳುವ ತವಕ. ಸಾಮಾಜಿಕ ಜಾಲತಾಣಗಳು ಕೂಡ ಫೋಟೊ ಹುಚ್ಚಿಗೆ ಇಂಬು ನೀಡುತ್ತಿವೆ. ಸೆಲ್ಫೀಯ ಹುಚ್ಚಿನಲ್ಲಿ ಪ್ರಾಣಕ್ಕೆ ಸಂಚಕಾರ ತಂದುಕೊಳ್ಳುವವರೂ ಇಲ್ಲದಿಲ್ಲ. ಬೆಟ್ಟದ ತುದಿಯಲ್ಲೋ ಪ್ರಪಾತದ ಅಂಚಿನಲ್ಲೋ ನಿಂತು ಫೋಟೊ ತೆಗೆಯುವ ಪ್ರಯತ್ನದಲ್ಲಿ ಜೀವ ಕಳೆದುಕೊಂಡವರಿದ್ದಾರೆ. ಒಂದು ಕ್ಷಣದ ರೋಮಾಂಚನ ಪ್ರಾಣಕ್ಕೇ ಸಂಚಕಾರ ಉಂಟುಮಾಡುತ್ತದೆ. ಇಂಥ ಅನಾಹುತಗಳನ್ನು ತಪ್ಪಿಸಲೆಂದೇ 'ಇದು ಸೆಲ್ಫೀ ಚಿತ್ರೀಕರಣ ತಾಣವಲ್ಲ' ಎನ್ನುವ ಸೂಚನಾ ಫಲಕಗಳನ್ನು ಅಪಾಯಕಾರಿ ಪ್ರದೇಶಗಳಲ್ಲಿ ಪ್ರದರ್ಶಿಸಲು ಕರ್ನಾಟಕ ಪ್ರವಾಸೋದ್ಯಮ ಇಲಾಖೆ ನಿರ್ಧರಿಸಿದೆ. ಇದೊಂದು ಸ್ವಾಗತಾರ್ಹ ಚಿಂತನೆ ಹಾಗೂ ಆದಷ್ಟು ಬೇಗನೆ ಜಾರಿಗೊಳ್ಳಬೇಕಾದ ಕಾರ್ಯಕ್ರಮ.

ಕಳೆದ ಮೇ ತಿಂಗಳಲ್ಲಿ ಗೋಕರ್ಣದಲ್ಲಿ ಸೆಲ್ಫೀ ಹುಚ್ಚಿಗೆ ಇಬ್ಬರು ಬಲಿಯಾಗಿದ್ದರು. ಜುಲೈ ತಿಂಗಳಲ್ಲಿ, ಚಿಕ್ಕಮಗಳೂರು ಜಿಲ್ಲೆಯ ಅಲೇಕಾನ್ ಜಲಪಾತದ ಪರಿಸರದಲ್ಲಿ ಮತ್ತಿಬ್ಬರು ಸಾವಿಗೀಡಾಗಿದ್ದರು. ಈ ಸಾವುಗಳ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡಿರುವ ಇಲಾಖೆ, ಸೂಚನಾಫಲಕಗಳ ಮೂಲಕ ಅಪಾಯಕಾರಿ ಸ್ಥಳಗಳನ್ನು ಪ್ರವಾಸಿಗರ ಗಮನಕ್ಕೆ ತರಲು ಮುಂದಾಗಿದೆ. ಈ ನಿಟ್ಟಿನಲ್ಲಿ ದಕ್ಷಿಣ ಕರ್ನಾಟಕ, ಕರಾವಳಿ ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕದ ಸುಮಾರು 400 ಸ್ಥಳಗಳನ್ನು ಗುರ್ತಿಸಲಾಗಿದೆ. ಇವುಗಳಲ್ಲಿ ನೀರಿನ ತಾಣಗಳು, ಪರ್ವತ ಶಿಖರ ಪ್ರದೇಶಗಳು ಹಾಗೂ ಕಡಿದಾದ ಬಂಡೆಗಳು ಸೇರಿವೆ. ಈ ಪ್ರದೇಶಗಳ ಪರಿಸರದಲ್ಲಿ ಸೆಲ್ಫೀ ತೆಗೆದುಕೊಳ್ಳದಿರುವಂತೆ ಎಚ್ಚರಿಕೆಯ ಫಲಕಗಳನ್ನು ಪ್ರದರ್ಶಿಸುವಂತೆ ಜಿಲ್ಲಾಡಳಿತಕ್ಕೆ ಸೂಚನೆ ರವಾನೆಯಾಗಿದೆ. ಕೆಲವು ಪ್ರದೇಶಗಳಲ್ಲಿ, ಸುರಕ್ಷಿತವಾಗಿ ಸೆಲ್ಫೀ ತೆಗೆದುಕೊಳ್ಳಬಹುದಾದ ಸ್ಥಳಗಳನ್ನೂ ಸೂಚಿಸಲಾಗುತ್ತಿದೆ. ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಈ ಸೂಚನೆಗಳು ಇರಲಿದ್ದು, ಎರಡೂ ಭಾಷೆಗಳು ಗೊತ್ತಿಲ್ಲದವರ ಅನುಕೂಲಕ್ಕಾಗಿ ಚಿತ್ರರೂಪದಲ್ಲಿಯೂ ಎಚ್ಚರಿಕೆಯ ಸೂಚನೆಗಳು ಇರಲಿವೆ.

> ಅಧ್ಯಯನವೊಂದರ ಪ್ರಕಾರ ಸೆಲ್ಫೀ ವ್ಯಾಮೋಹಕ್ಕೆ ಈವರೆಗೆ ಬಲಿಯಾದವರಲ್ಲಿ ಭಾರತೀಯರ ಸಂಖ್ಯೆಯೇ ಹೆಚ್ಚು. ಈವರೆಗೆ ವರದಿಯಾಗಿರುವ 127 ಪ್ರಕರಣಗಳಲ್ಲಿ 76 ಸಾವುಗಳು ಭಾರತದಲ್ಲೇ ಸಂಭವಿಸಿವೆ.

ಅಧ್ಯಯನವೊಂದರ ಪ್ರಕಾರ ಸೆಲ್ಫೀ ವ್ಯಾಮೋಹಕ್ಕೆ ಈವರೆಗೆ ಬಲಿಯಾದವರಲ್ಲಿ ಭಾರತೀಯರ ಸಂಖ್ಯೆಯೇ ಹೆಚ್ಚು. ಈವರೆಗೆ ವರದಿಯಾಗಿರುವ 127 ಪ್ರಕರಣಗಳಲ್ಲಿ 76 ಸಾವುಗಳು ಭಾರತದಲ್ಲೇ ಸಂಭವಿಸಿವೆ. ಎರಡನೆಯ ಸ್ಥಾನ ಪಾಕಿಸ್ತಾನದ್ದು. ನಂತರದ ಸ್ಥಾನಗಳಲ್ಲಿ ಅಮೆರಿಕ, ರಷ್ಯಾ, ಚೀನಾಗಳಿವೆ. ಅಪಾಯಕಾರಿ ಸನ್ನಿವೇಶದಲ್ಲಿ ಸೆಲ್ಫೀ ತೆಗೆದುಕೊಳ್ಳುವವರಲ್ಲಿ ಶೇ 13ಕ್ಕೂ ಹೆಚ್ಚು ನತದೃಷ್ಟರು 24 ವರ್ಷಕ್ಕಿಂತಲೂ ಕಡಿಮೆ ವಯಸ್ಸಿನವರು ಎನ್ನುವುದು ಗಮನಾರ್ಹ. ಯೌವನದ ಉತ್ಸಾಹದಲ್ಲಿ ಕೈಯಲ್ಲಿರುವ ಮೊಬೈಲ್ ಕೆಲವರಿಗೆ ಮಂತ್ರದಂಡದಂತೆ ಕಾಣಿಸುತ್ತದೆ. ಬೆರಳತುದಿಯಲ್ಲಿನ ತಂತ್ರಜ್ಞಾನವನ್ನು ವಿವೇಕದಿಂದ ಬಳಸುವ ಸಾವಧಾನ ಎಲ್ಲರದಾಗಬೇಕಿದೆ.

'ಸೆಲ್ಫೀ'ಯ ಕುರಿತು ಜಾಗೃತಿ ಮೂಡಿಸುವ ಪ್ರವಾಸೋದ್ಯಮ ಇಲಾಖೆಯ ಕಾಳಜಿ ಅಭಿನಂದನೆಗೆ ಅರ್ಹವಾದುದು. ಆದರೆ, ಈ ಪ್ರಯತ್ನ ಆರಂಭಶೂರತ್ವ ಆಗಬಾರದು. ಕಳೆದ ಆಗಸ್ಟ್‌ನಲ್ಲಿ ಮೈಸೂರಿನ ಚಾಮುಂಡಿ ಬೆಟ್ಟವನ್ನು 'ಸೆಲ್ಫೀ ರಹಿತ' ತಾಣವನ್ನಾಗಿ ರೂಪಿಸಲು ಮೈಸೂರು ಜಿಲ್ಲಾಡಳಿತ ಹಾಗೂ ಪ್ರವಾಸೋದ್ಯಮ ಇಲಾಖೆ ಪ್ರಯತ್ನಿಸಿತ್ತು. ಸ್ವಲ್ಪ ಸಮಯದಲ್ಲೇ ಕಾವು ಕಳೆದುಕೊಂಡ ಆ ಕಾರ್ಯಕ್ರಮ ವಿಫಲವಾಯಿತು. ಆ ವೈಫಲ್ಯ ಮತ್ತೆ ಮರುಕಳಿಸದಂತೆ ಇಲಾಖೆ ಸೂಕ್ತ ಎಚ್ಚರಿಕೆ ವಹಿಸಬೇಕಾಗಿದೆ. ಸೂಚನಾಫಲಕಗಳನ್ನು ಪ್ರದರ್ಶಿಸುವ ಜೊತೆಗೆ, ಆ ಸೂಚನೆಗಳನ್ನು ಪಾಲಿಸುವಂತೆ ಪ್ರವಾಸಿಗರನ್ನು ಒತ್ತಾಯಿಸುವ ನಿಟ್ಟಿನಲ್ಲೂ ಸಕ್ರಿಯವಾಗಬೇಕಾಗಿದೆ. ಇಲಾಖೆಯ ಪ್ರಯತ್ನಗಳಿಗೆ ಯುವಜನತೆ ಕೂಡ ಸ್ಪಂದಿಸಬೇಕಿದೆ. ಸೆಲ್ಫೀ ಎನ್ನುವುದು ಸಂತಸದ ಕ್ಷಣಗಳ ದಾಖಲೆಯಾಗಬೇಕೇ ಹೊರತು ದುರಂತಕ್ಕೆ ಎಡೆ ಮಾಡಿಕೊಡುವ ಉದಾಹರಣೆ ಆಗಬಾರದು.

**■ ರಘುನಾಥ ಚ.ಹ.**



ಈಶ್ವರ್